ಬಹಳ ಮುಖ್ಯವಾಗಿ ಇಂಟಿಗ್ರೇಟೆಡ್ ವೆಸ್ಟ್ ಮ್ಯಾನೇಜ್‌ಮೆಂಟ್‌ನ್ನು ನಾವು ಈಗಾಗಲೇ ಇಲಾಖೆಯ ಮಟ್ಟದಲ್ಲಿ ಅದನ್ನು ಅಲಾಟ್ ಮಾಡಿದ್ದೇವೆ. ಇದರ ಜೊತೆಗೆ ಏನಾಗುತ್ತದೆಂದರೆ, ಎಂಡಮಿಕ್ ಎಂದಾದ ಮೇಲೆ ತಾವು ವಿಶೇಷ ಗಮನವನ್ನು ಸೆಳೆದು ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಈ ರೋಗವು ಕೇವಲ ಮಂಡ್ಯ ಮತ್ತು ಶಿವಮೊಗ್ಗಕ್ಕೆ ಮಾತ್ರ ಸೀಮಿತವಾಗಿರದೆ ಇದು ಎಲ್ಲಾ ಭಾಗದಲ್ಲಿಯೂ ಇದೆ. ನಾವು ಮುಂಜಾಗ್ರತೆಯ ಕ್ರಮವಾಗಿ ಇದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಸಾಕಷ್ಟು ಹಣವನ್ನು ಜಿಲ್ಲಾ ಪಂಚಾಯತ್ ಹಾಗೂ ಸರ್ಕಾರದಿಂದ ಬಿಡುಗಡೆ ಮಾಡಿ, ನಾವು ಕಂಟ್ರೋಲ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಇದಕ್ಕಿಂತಲೂ ಹೆಚ್ಚಾಗಿ ಮಾನ್ಯ ಸದಸ್ಯರಾದ ಶ್ರೀ ಕೆ. ಶ್ರೀನಿವಾಸಗೌಡರು ಹೇಳಿದರು. ದಿನದಿಂದ ದಿನಕ್ಕೆ ಹೊಸಹೊಸದಾಗಿ ರೋಗಗಳು ಕಾಣಿಸಿಕೊಂಡಂತಹ ಸಂದರ್ಭದಲ್ಲಿ ನಾವು ಒಂದು ಸರ್ವೇಲೆನ್ಸ್‌ನ್ನು ಮ್ಯಾನೇಜ್‌ಮೆಂಟ್‌ನ್ನು ಇದು ಕಟಾವು ಆದ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆಯೂ ಕೂಡ ಮಾಹಿತಿಯನ್ನು ತರಿಸಿಕೊಂಡು ಆಯಾಯ ಪ್ರದೇಶಕ್ಕೆ ಸೀಮಿತವಾಗಿರತಕ್ಕಂತಹ ರೋಗಗಳು ಯಾವುದು ಎಂಬುದನ್ನು ಐಡೆಂಟಿಫೈ ಮಾಡಿ, ಕೃಷಿ ವಿಜ್ಞಾನಿಗಳ ಜೊತೆಗೂಡಿ, ಇಲಾಖೆಯವರನ್ನು ಸಹ ಜೊತೆಗೂಡಿಸಿ ಒಂದು ಸರ್ವೇಲೆನ್ಸ್‌ನ್ನು ಮಾಡುತ್ತೇವೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ಅವಶ್ಯಕತೆ ಬಿದ್ದರೆ ನಾನು ನಿಮ್ಮ ಹತ್ತಿರ ಚರ್ಚೆ ಮಾಡುವುದಲ್ಲದೆ ಆಯಾ ಪ್ರದೇಶಕ್ಕೆ ಸಂಬಂಧಿಸಿ ಸೀಮಿತವಾಗುವಂತೆ ಕರಪತ್ರಗಳನ್ನು ಮುದ್ರಿಸಿ ಹಂಚಲು ಕ್ರಮವನ್ನು ಕೈಗೊಳ್ಳುತ್ತೇವೆ. ಅದರ ಜೊತೆಗೆ ಮುಂದೆ ಯಾವುದೇ ಭಾಗದಲ್ಲಿ ಯಾವ ತರಹದ ರೋಗಗಳು ಬರುತ್ತದೆ ಎಂಬುದರ ಬಗ್ಗೆ ಅಂಟಿಸಿಪೇಟ್ ಮಾಡತಕ್ಕಂಥದ್ದು ಕೂಡ ಅವಕಾಶವಿದೆ. ಇವೆಲ್ಲವನ್ನು ಕೂಡ ಸಮಗ್ರವಾಗಿ ಮಾಡುವುದರ ಮೂಲಕ ಆ ಪೀಡೆಯನ್ನು ನಿವಾರಣೆಯನ್ನು ಮಾಡುವಂತಹ ಕೆಲಸವನ್ನು ನಾನು ಸ್ಪಷ್ಟವಾಗಿ ಮಾಡುವುದಕ್ಕೆ ಸರ್ಕಾರವು ತೀರ್ಮಾನವನ್ನು ಮಾಡಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

ವಿಷಯ (ಅ) ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ನಿಗಮವು ರೋಗಗ್ರಸ್ಥವಾಗಿದ್ದು, ಅದನ್ನು ಪುನರುಜ್ಜೀವನಗೊಳಿಸುವ ಬಗ್ಗೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ನಿಗಮವು ರೋಗಗ್ರಸ್ಥವಾಗಿದ್ದು, ಅದನ್ನು ಪುನರುಜ್ಜೀವನಗೊಳಿಸುವ ಬಗ್ಗೆ ರೇಷ್ಮೆ ಮತ್ತು ಜವಳಿ ಸಚಿವರ ಗಮನವನ್ನು ನಾನು ಸೆಳೆಯುತ್ತೇನೆ.

+ ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿ ಕರ್ನಾಟಕ ರೇಷ್ಮೆ ಉದ್ಯಮಗಳ

ನಿಗಮ ನಿಯಮಾವಳಿ 1980ರಲ್ಲಿ ಪ್ರಾರಂಭಗೊಂಡಿರುತ್ತದೆ. ನಿಗಮದ ಘಟಕಗಳಾದ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು, ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರ ಮತ್ತು ರೇಷ್ಮೆ ನೂರು ತೆಗೆಯುವ ಘಟಕ, ಟಿ.ನರಸೀಪುರ ಇವುಗಳ ನವೀಕರಣ ಹಾಗೂ ವಿಸ್ತಾರಗೊಳಿಸುವಿಕೆಯ ಇದರ ಮುಖ್ಯ ಉದ್ದೇಶವಾಗಿರುತ್ತದೆ. ಕರ್ನಾಟಕ ಸರ್ಕಾರದ ರೇಷ್ಮೆ ಯೋಜನೆ ಮತ್ತು ವಿಶ್ವಬ್ಯಾಂಕ್ ಸಹಕಾರ ಹಾಗೂ ಹಣಕಾಸು ಸಂಸ್ಥೆಗಳಾದ ಐ.ಡಿ.ಬಿ.ಐ., ಐಎಫ್.ಸಿ.ಐ. ಮತ್ತು ಐಸಿ.ಐ.ಸಿ.ಐ ಸಹಯೋಗದೊಂದಿಗೆ ಒಟ್ಟಾರೆ ರೂ. 27. 93 ಕೋಟಿಗಳ ಯೋಜನಾ ವೆಚ್ಚ ಇದರಲ್ಲಿ ಒಳಗೊಂಡಿರುತ್ತದೆ.

ನಿಗಮವು ಪ್ರಾರಂಭವಾದಾಗಿನಿಂದ ಕೆಲವು ವರ್ಷಗಳನ್ನು ಹೊರತುಪಡಿಸಿ ನಷ್ಟವನ್ನು ಅನುಭವಿಸುತ್ತಾ ಬಂದಿದ್ದು, ನಷ್ಟಕ್ಕೆ ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತವೆ.

1) ಕಾರ್ಯಾಚರಣೆ ಬಂಡವಾಳಗಳಲ್ಲಿ ವ್ಯತ್ಯಯ
2) ಮಾರಾಟ ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಪ್ರಬಲ ಪೈಪೋಟಿ
3) ಘಟಕಗಳಿಗೆ ಬೇಕಾದ ಕಚ್ಚಾ ವಸ್ತುಗಳಾದ ಉತ್ತಮ ದರ್ಜೆಯ ರೇಷ್ಮೆಗೂಡು, ಕಚ್ಚಾ ರೇಷ್ಮೆ ಹಾಗೂ ಜೂಟು ರೇಷ್ಮೆ ಇವುಗಳ ಕೊರತೆ
4) ಕಾರ್ಮಿಕ ಮತ್ತು ಸಿಬ್ಬಂದಿ ವರ್ಗದವರಿಗೆ ಪರಿಷ್ಕೃತ ವೇತನ ಶ್ರೇಣಿ ಹಾಗೂ ಹೆಚ್ಚುವರಿ ತುಟ್ಟಿಭತ್ಯೆ ಇವುಗಳ ವಿಸ್ತರಣೆ

ನಿಗಮವು ಸತತವಾಗಿ ನಷ್ಟ ಅನುಭವಿಸಿದ್ದ ಕಾರಣ ಹಾಗೂ ಅದರ ಮೂಲ ಬಂಡವಾಳವೇ ಸವೆದಾಗ ಪುನಶ್ಚೇತನಕ್ಕಾಗಿ 1994-95ರಲ್ಲಿ ನಿಗಮವನ್ನು ಬಿಐಎಫ್ಆರ್ ಸಂಸ್ಥೆಗೆ ವಹಿಸಲಾಯಿತು. ಬಿಐಎಫ್ಆರ್ ಸಂಸ್ಥೆಯು 1997ರಲ್ಲಿ ನಿಗಮದ ಪುನಶ್ಚೇತನದ ಬಗ್ಗೆ ಯೋಜನೆಯನ್ನು ರೂಪಿಸಿದ್ದು ಸದರಿ ಯೋಜನೆಯ ಘನ ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುತ್ತದೆ.

ಈ ಪುನಶ್ಚೇತನ ಯೋಜನೆಯಲ್ಲಿ ಅನುಮೋದನೆಗೊಂಡಿರುವಂತೆ ಸರ್ಕಾರದಿಂದ ರೂ. 1560.00 ಲಕ್ಷಗಳ ಧನ ಸಹಾಯವು ಬರಬೇಕಾಗಿದ್ದು, ಇದರಲ್ಲಿ ಸ್ವಯಂ ನಿವೃತ್ತಿ ಯೋಜನೆ ಬಾಬ್ತು ನೀಡಬೇಕಾದ ಮೊತ್ತ ರೂ. 171.00 ಲಕ್ಷವನ್ನು ಹೊರತುಪಡಿಸಿ ಮಿಕ್ಕ ಧನ ಸಹಾಯವನ್ನು ಸರ್ಕಾರವು ಬಿಡುಗಡೆ ಮಾಡಿದ್ದು, ನಿಗಮವು ಹಣಕಾಸು ಸಂಸ್ಥೆಗಳಿಗೆ ನೀಡಬೇಕಾಗಿದ್ದ ಸಾಲವನ್ನು ಮರುಪಾವತಿ ಮಾಡಿರುತ್ತದೆ.

ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ವ್ಯಾಪ್ತಿಯಲ್ಲಿನ ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್ಸ್‌ನ ನೌಕರರಿಗೆ ಸ್ವಯಂಇಚ್ಛಾ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲು ಹಣ ಬಿಡುಗಡೆ ಮಾಡುವ ಬಗ್ಗೆ, ನಿಗಮವು ಹೊಂದಿರುವ ಜಮೀನನ್ನು ಮಾರಾಟ ಮಾಡಿ,

ಇದರಿಂದ ಬಂದ ಹಣವನ್ನು ಸ್ವಯಂ ನಿವೃತ್ತಿ ಯೋಜನೆಗೆ ತೊಡಗಿಸುವಂತೆ ನಿಗಮಕ್ಕೆ ನಿರ್ದೇಶನ ನೀಡಲಾಗಿದೆ.

ನಿಗಮದ ಪುನಶ್ಚೇತನ ಯೋಜನೆಯ ಪ್ರಕಾರ ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರವನ್ನು ಕೆ.ಎಸ್.ಐ.ಸಿ.ಯಿಂದ ಬೇರ್ಪಡಿಸುವ ಹಂತದಲ್ಲಿದೆ.

ನಿಗಮದ ಉತ್ಪಾದನೆಯಾದ ಮೈಸೂರು ರೇಷ್ಮೆ ಜಗತ್ ಪ್ರಸಿದ್ಧಿಯಾಗಿದ್ದು, ಈ ಪರಂಪರೆಯನ್ನು ಉಳಿಸಿಕೊಂಡು ತನ್ನ ಮಾರಾಟ ವ್ಯವಸ್ಥೆಯಲ್ಲಿ ನವೀನ ಮಾದರಿಯವುಗಳಾದ ಟಿಸ್ಸು ಸೀರೆ, ರಿಚ್‌ಪಲ್ಲು ಸೀರೆ, ಗೋಲ್ಡ್ ವೇಸ್ಟ್ ಪ್ರಿಂಟಿಂಗ್ ಸೀರೆ, ವೇಸ್ಟಲ್ ಬಣ್ಣದ ಸೀರೆಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಿದ್ದು, ಮುದ್ರಣ ತಂತ್ರಜ್ಞಾನವನ್ನು ಮುಂಬಯಿ, ದೆಹಲಿ ನಗರಗಳಿಂದ ಪಡೆದುಕೊಂಡು ಉತ್ಪಾದನೆ ಮತ್ತು ಮಾರಾಟದ ವ್ಯವಸ್ಥೆಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸುತ್ತಿದೆ. ಇದಲ್ಲದೆ ಮಾರಾಟ ವಹಿವಾಟನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿಗಮವು ಸತತವಾಗಿ ಪ್ರದರ್ಶನ ಮಾರಾಟಗಳನ್ನು ರಾಜ್ಯದ ಹೊರಗೆ ಮತ್ತು ಒಳಗೆ ನಡೆಸುತ್ತಾ ಬರುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಮಾರಾಟ ವಹಿವಾಟು ಗಣನೀಯವಾಗಿ ಪ್ರಗತಿಹೊಂದಿದೆ. ನಿಗಮವು ತನ್ನ ಉತ್ಪಾದನೆಯನ್ನು ತನ್ನದೆ ಆದ ಮಾರಾಟ ಮಳಿಗೆಗಳ ಮುಖೇನ ಮಾರಾಟ ಮಾಡುವುದಲ್ಲದೆ ಅಧಿಕೃತ ಮಾರಾಟಗಾರರು ಹಾಗೂ ಸರಕು ದಾಸ್ತಾನು ಮಾರಾಟಗಾರರ ಮುಖೇನ ಸಹ ಮಾರಾಟ ಮಾಡುತ್ತಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅಧಿಕೃತ ಮಾರಾಟಗಾರರನ್ನು ನೇಮಕ ಮಾಡಿಕೊಂಡು ಹಾಗೂ ನಿಗಮವು ಮಾರಾಟ ಮಳಿಗೆಗಳನ್ನು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಿಸಿ ಮಾರಾಟ ವಹಿವಾಟನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಗತಿಪರ ಹೆಜ್ಜೆಯನ್ನು ಇಡುತ್ತಿದೆ.

ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ನೀಡಬಯಸುತ್ತಾ, ನಿಗಮವನ್ನು "ರೋಗಗ್ರಸ್ಥ ನಿಗಮ" ಎಂಬ ಹಣೆಪಟ್ಟಿಯಿಂದ ಹೊರತುಪಡಿಸಿ, ನಿಗಮವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಬಗ್ಗೆ ನಿಗಮವು ನಿಖರವಾದ ಆತ್ಮ ವಿಶ್ವಾಸವನ್ನು ಹೊಂದಿದೆ ಎಂಬ ಅಂಶವನ್ನು ತಿಳಿಯಬಯಸುತ್ತೇನೆ.

+ ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಈ ನಿಗಮವು 1980ರಲ್ಲಿ ಪ್ರಾರಂಭವಾದಾಗಿನಿಂದ ಇವತ್ತಿನವರೆಗೆ ಏನಾಗಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಟ್ಟರು. ಇದರಲ್ಲಿ ಪ್ರಮುಖವಾಗಿ 1980ರಲ್ಲಿ ಈ ಕಾರ್ಖಾನೆಯನ್ನು ಕೆಎಸ್‌ಐಸಿ ಎಂದು ಹೇಳಿ ಇದು ಸ್ಥಾಪನೆಯಾದ ನಂತರ, ಮೈಸೂರಿನಲ್ಲಿ 1932ನೇ ಇಸವಿಯಲ್ಲಿ ಪ್ರಾರಂಭವಾಗಿದ್ದಂತಹ ಸರ್ಕಾರಿ ಸಿಲ್ಕ್ ಕಾರ್ಖಾನೆಯನ್ನು ರೇಷ್ಮೆ ಸೀರೆಯನ್ನು ತಯಾರು ಮಾಡುವಂತಹದನ್ನು ಇದಕ್ಕೆ ಸೇರಿಸಿದರು. ಇದು 1980ರವರೆಗೆ ಲಾಭದಾಯಕವಾಗಿಯೇ ಇತ್ತು, ಇದು ಪ್ರಪಂಚಕ್ಕೆ ಪ್ರತಿ ವರ್ಷವೂ ಕೂಡ ಉತ್ತಮವಾದಂತಹ

ರೇಷ್ಮೆ ಬಟ್ಟೆಯನ್ನು ಕೊಡುತ್ತಿತ್ತು. ಸರ್ಕಾರವು ಈ ಒಂದು ನಿಗಮವನ್ನು 1980ರಲ್ಲಿ ಪ್ರಾರಂಭ ಮಾಡಿದರೂ ಅಂದಿನಿಂದ ಇದು ಲಾಸ್ ಆಗುವುದಕ್ಕೆ ಪ್ರಾರಂಭವಾಯಿತು. ಇದು ಮಾನ್ಯ ಸಚಿವರ ಗಮನಕ್ಕೂ ಕೂಡ ಬಂದಿದೆ. ಇದರ ಬಗ್ಗೆ ಎಲ್ಲೂ ಕೂಡ ಮೆನ್‌ಷನ್ ಮಾಡಿರುವುದಿಲ್ಲ.

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಒಂದು ಅಥವಾ ಎರಡು ಸಂದರ್ಭಗಳನ್ನು ಬಿಟ್ಟರೆ ಯಾವ ಕಾಲದಿಂದಲೂ ಈ ಕಾರ್ಖಾನೆ ಲಾಭದಾಯಕವಾಗಿ ನಡೆದಿಲ್ಲ.

ಶ್ರೀ ಎ. ರಾಮದಾಸ್:— ಇದರ ಬಗ್ಗೆ ನಾನು ಹೇಳಿದರೆ ತಾವು ಖಾರವಾಗಿ ಹೇಳುತ್ತಿರೆಂದು ಮಾನ್ಯ ಅಧ್ಯಕ್ಷರೆ ತಾವು ಹೇಳುತ್ತೀರಿ. ಮಾನ್ಯ ಸಚಿವರು ಉತ್ತರವನ್ನು ಹೇಳುವಂತಹ ಸಂದರ್ಭದಲ್ಲಿ 1980ರಿಂದಲೂ ಕೂಡ ಲಾಸ್ ಆಗಿ ಬರುತ್ತಿದೆಂದು ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಈಗ ಮಾನ್ಯ ಸಚಿವರೇ ಯಾವತ್ತು ಕೂಡ ಲಾಭದಾಯವಾಗಿಯೇ ಬಂದಿಲ್ಲ ಎಂದು ಉತ್ತರವನ್ನು ಹೇಳುತ್ತಾರೆ. ಇದರಲ್ಲಿ ಒಂದು ಅಥವಾ ಎರಡು ಪ್ರಕರಣಗಳ ಬಗ್ಗೆ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸದನಕ್ಕೆ ಉತ್ತರವನ್ನು ಹೇಳುವಂತಹ ಸಂದರ್ಭದಲ್ಲಿ ಆ ಎರಡು ಪ್ರಕರಣಗಳನ್ನು ಉತ್ತರದಲ್ಲಿ ಸೇರಿಸಿಲ್ಲ. ಇದರ ಬಗ್ಗೆ ಪ್ರಮುಖವಾದಂತಹ ವಿಚಾರವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ವಿಶ್ವಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದೀರಲ್ಲಾ.... ಸರ್ಕಾರದ ಬೊಕ್ಕಸಕ್ಕೆ ಹೇಗೆ ಲಾಸ್ ಆಗಿದೆ ಎಂಬುದರ ವಿಚಾರವನ್ನು ಆದರಲ್ಲೂ ಪ್ರಮುಖವಾಗಿ ಯಾವ ಪ್ರಕರಣಗಳಿಂದಾಗಿದೆ ಎಂಬುದನ್ನು ಇಲ್ಲ ತಾವು ಹೇಳಲಿಲ್ಲ. ತಾವು ಪ್ರಮುಖವಾಗಿ ಟಿ. ನರಸೀಪುರದ ಘಟಕವನ್ನು ಪ್ರಾರಂಭ ಮಾಡಿದ್ದೀರಿ, ರೈತರಿಗೆ ವಿಶೇಷವಾಗಿ, ಪ್ರಮುಖವಾದಂತಹ ರೀತಿಯಲ್ಲಿ, ರೈತರಿಗೆ ತೊಂದರೆಯಾಗುವಂತಹ ಸಂದರ್ಭದಲ್ಲಿ ಸ್ಯೆಂಟಿಫಿಕ್ ರೇಟನ್ನು ಕೊಡಬೇಕೆಂದು ಈ ಘಟಕವನ್ನು ಪ್ರಾರಂಭ ಮಾಡಿದ್ದೀರಿ. ಆದರೆ ಇವತ್ತಿನವರೆವಿಗೂ ಕೂಡ ರೈತರಿಗೆ ಬೇಕಾಗಿರುವಂತಹ ವೈಜ್ಞಾನಿಕವಾದಂತಹ ನಿರ್ದಿಷ್ಟವಾದಂತಹ ಬೆಲೆಯನ್ನು ಕೊಡುವುದಕ್ಕೆ ಕೆಲಸವನ್ನು ಮಾಡಿಲ್ಲ. ಈ ಆ ಯಂತ್ರಗಳು ಹಾಗಿಯೇ ಉಳಿಯುವಂತಹ ವ್ಯವಸ್ಥೆಯಾಗಿದೆ, ಇದು ಏಕೆ ಎನ್ನುವಂತಹ ಪ್ರಶ್ನೆ? ಇನ್ನು ಎರಡನೆಯದಾಗಿ ತಾವೇ ಹೇಳಿದಂತಹ ರೀತಿಯಲ್ಲಿ ಇದನ್ನು ಬಿಐಎಫ್‌ಆರ್ ಗೆ ರೆಫರ್ ಆಗಿ ಬಂದ ನಂತರದಲ್ಲಿ ಇದು ಸರ್ಕಾರದ ಬೊಕ್ಕಸಕ್ಕೆ ಹೇಗೆ ನಷ್ಟವಾಗಿದೆ ಎಂಬುದು ಇಲ್ಲಿ ವಿಚಾರವಾಗಿದೆ. ಎರಡನೆಯದಾಗಿ ಮೈಸೂರಿನಲ್ಲಿ ಈಗಾಗಲೇ ತಮಗೆ ತಿಳಿದ ಹಾಗೆ ಸುಮಾರು 159 ಲೂಮುಗಳಿದ್ದು ಅಲ್ಲಿ ಕೇವಲ 70 ಲೂಮುಗಳಲ್ಲಿ ಮಾತ್ರ ಕೆಲಸ ಮಾಡುತ್ತಿರುವುದು ಇಲ್ಲಿ 902 ಜನ ಕಾರ್ಮಿಕರಿದ್ದಾರೆ, ವಿ.ಆರ್. ಎಸ್. ಕೊಡಬೇಕೆಂಬುದರ ಬಗ್ಗೆ ಬಹಳ ವರ್ಷಗಳ ಕಾಲದಿಂದ ಸರ್ಕಾರದಲ್ಲೂ ಕೂಡ ಪ್ರಸ್ತಾವವಿದೆ. ತಾವು ಹೇಳಿದ ಹಾಗೆ

171.00 ಲಕ್ಷ ರೂಪಾಯಿಗಳು ಏಕೆ ಬಿಡುಗಡೆಯಾಗಿಲ್ಲ, ಕೊನೆಯ ಪಕ್ಷ ಅವರಿಗೆ ಸ್ವಯಂ ನಿವೃತ್ತಿಯೋಜನೆಯ ಬಾಬ್ತನ್ನು ಕೊಟ್ಟಿದ್ದರೆ ಇವತ್ತು ಆ ಕಾರ್ಖಾನೆಯ ಪುನಶ್ಚೇತನವಾಗುತ್ತಿತ್ತೆ? ಇದರ ಬಗ್ಗೆ ತಮ್ಮ ಗಮನಕ್ಕೆ ಬಂದಿದೆ, ಇದರಲ್ಲಿ ತಾವು ಪ್ರಮುಖವಾದಂತಹ ಒಂದು ಅಂಶವನ್ನು ಬಿಟ್ಟಿದ್ದೀರಿ, ಕೆಎಸ್‌ಐಸಿಯಲ್ಲಿ ಒಬ್ಬ ಐಎಎಸ್ ಅಧಿಕಾರಿ ಇದ್ದಂತಹ ಕಾಲದಲ್ಲಿ, ಅಂದರೆ, 1997-98ರಲ್ಲಿ ಇದು ಲಾಭದಾಯಕವಾಗಿಯೇ ಇತ್ತು. ನಂತರ 3 ವರ್ಷಗಳ ಕಾಲ ಸಂಪೂರ್ಣವಾಗಿ ಲಾಸ್ ಆಯಿತು. ಲಾಭದಾಯಕವಾಗಿದ್ದಂಥ ಕಾರ್ಖಾನೆಯು ಲಾಸ್ ಆಗುವುದಕ್ಕೆ ಕಾರಣವೇನು? ಬಿಐಎಫ್ ಆರ್ ಬಂದ ನಂತರದಲ್ಲಿ, ಆ ಕಾರ್ಖಾನೆಯ ಲಾಭ ಎರಡೂಮುಕ್ಕಾಲು ಕೋಟಿ ರೂಪಾಯಿಗಳಿತ್ತು, ನಂತರ ನಾಲ್ಕೂವರೆ ಕೋಟಿ ರೂಪಾಯಿಗಳು ಲಾಸ್ ಆಯಿತು. ದಿನಾಂಕ 7-1-2000ರಂದು ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದು, ಇವತ್ತಿನವರೆಗೂ ಕೂಡ ಅವರಿಂದ ನನಗೆ ಉತ್ತರವು ಬಂದಿಲ್ಲ. ಆದರೆ ಪತ್ರ ಬರೆದ ತಕ್ಷಣದಲ್ಲೇ 2 ವರ್ಷಗಳ ಕಾಲ ಇದರಲ್ಲಿ ಅವ್ಯವಹಾರವಾಗಿರುವ ಬಗ್ಗೆ ನಾನು ಪತ್ರವನ್ನು ಬರೆದಿದ್ದು, ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಎನ್‌ಕ್ವೈರಿ ಆರ್ಡರ್ ಮಾಡಿದ ಮೇಲೆ, ನಾನು ಯಾವ ಅಧಿಕಾರಿಯ ಮೇಲೆ ಇವತ್ತು ನಾನು ವಿಚಾರವನ್ನು ಹೇಳುತ್ತಿದ್ದೇನೆ, ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಇದನ್ನು ಗಮನಿಸಬೇಕು, ಆ ಅಧಿಕಾರಿ 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಅಧ್ಯಕ್ಷರು :— ಭಾಷಣ ಮಾಡಬೇಡಿ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಎ. ರಾಮದಾಸ್ :— ನಾನು ಪತ್ರವನ್ನು ಬರೆದಿದ್ದೇನೆ. ಆ ಅಧಿಕಾರಿ ಸುಮಾರು 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರೇಷ್ಮೆ ಬಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ದುಬೈಗೆ ಹೋದಾಗ ಅಲ್ಲಿ ಮಾರಾಟ ಮಾಡಿರುವುದು 5 ಲಕ್ಷ ರೂಪಾಯಿ ಬಟ್ಟೆ. ಆದರೆ 13 ಲಕ್ಷ ರೂಪಾಯಿ ಖರ್ಚು ಹಾಕಿದ್ದಾನೆ. ಅದರ ಬಗ್ಗೆ ನಾನು ಪತ್ರವನ್ನು ಬರೆದಿದ್ದೇನೆ.

ಅಧ್ಯಕ್ಷರು :— ಗಮನ ಸೆಳೆಯುವ ಸೂಚನೆಯಲ್ಲಿ ಒಂದೆರಡು ಕ್ಲಾರಿಫಿಕೇಶನ್ಸ್ ಕೇಳಬಹುದು. ಅದಕ್ಕಿಂತ ಹೆಚ್ಚು ಕೇಳುವುದಕ್ಕೆ ಆಗುವುದಿಲ್ಲ. ತಾವು ಭಾಷಣ ಮಾಡುತ್ತಿದ್ದೀರಿ.

ಶ್ರೀ ಎ. ರಾಮದಾಸ್ :— ಈ ಅಧಿಕಾರಿ ಬಂದಮೇಲೆ ಲಾಸ್ ಆಗಿದೆ.

ಅಧ್ಯಕ್ಷರು :— ಆ ತರಹ ಕೇಳಿ.

ಶ್ರೀ ಎ. ರಾಮದಾಸ್ :— ಅದಕ್ಕೆ ಸಂಬಂಧಪಟ್ಟಹಾಗೆ ನಾನು ತಮಗೆ ಪತ್ರವನ್ನು ಬರೆದಿದ್ದೇನೆ. ಅವರಿಗೆ ಕೊಟ್ಟ ಕ್ರೆಡಿಟ್ ಕಾರ್ಡಿನಲ್ಲಿ ಮನೆಗೆ ಬೇಕಾಗಿರುವ ತರಕಾರಿಗಳನ್ನು

ತರಿಸಿಕೊಂಡಿರುವ ಬಗ್ಗೆ ಆಡಿಟ್ ಅಬ್ಜೆಕ್ಷನ್ ಬಂದಿರುವ, ಬಗ್ಗೆ ತಮ್ಮಗೆ ಲೆಟರ್ ಬರೆದಿದ್ದೇನೆ. ನಾನು ಪ್ರಮುಖವಾದ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇಷ್ಟಾದರೂ ಕೂಡ ತಾವು ಕ್ರಮ ತೆಗೆದುಕೊಂಡಿಲ್ಲ. ನನಗೆ ಆಶ್ಚರ್ಯವಾಗುತ್ತಿದೆ, ಎನ್‌ಕ್ವಾಯರಿ ಪ್ರಾರಂಭ ಮಾಡಿದ ಮೇಲೆ ಮೈಸೂರು ನಗರದಲ್ಲಿದ್ದಂತಹ ಸಿಲ್ಕ್ ಫ್ಯಾಕ್ಟರಿಗೆ ಗೋಡೌನ್‌ಗೆ ಬೆಂಕಿ ಬಿತ್ತು.

ಅಧ್ಯಕ್ಷರು :— ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದಾರೆ. ದಯವಿಟ್ಟು ಕ್ಷಮಿಸಿ. ಮಂತ್ರಿಗಳು ಉತ್ತರ ಹೇಳಿ. ತಾವು ಕ್ಲಾರಿಫಿಕೇಶನ್ಸ್ ಮಾತ್ರ ಕೇಳಿಯೆಂದು ಹೇಳುತ್ತಿದ್ದೇನೆ.

ಶ್ರೀ ಎ. ರಾಮದಾಸ್ :— ಆ ರೆಕಾರ್ಡ್ ರೂಮಿಗೆ ಬೆಂಕಿ ಹಾಕಿದವರು ಯಾರು? ಅನಂತರ ತಾವು ಅಲ್ಲಿಗೆ ಬಂದಾಗ ಹೇಳಿದಿರಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇನೆಂದು. ಆದರೆ ತಾವು ಸಸ್ಪೆಂಡ್ ಮಾಡಿರುವುದು ಅಲ್ಲಿರುವ ಒಬ್ಬ ವಾಚ್‌ಮನ್ ಮತ್ತು ಒಬ್ಬ ಹೆಡ್ ಮಾಸ್ಟರ್. ಆ ಬಗ್ಗೆ ತಾವೇನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಎಂ. ಮಹದೇವ್ :— ಮಾನ್ಯ ಅಧ್ಯಕ್ಷರೆ, ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ 15 ಕೋಟಿ ರೂಪಾಯಿ ಧನಸಹಾಯವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಲಾಗಿದೆ. ಸರ್ಕಾರ 13.81 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇನ್ನು ಉಳಿದ ಹಣವನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಅದು ಬಂದಮೇಲೆ ವಾಲೆಂಟರಿ ರಿಟೈರ್‌ಮೆಂಟ್ ಸ್ಕೀಮ್‌ನ್ನು ಅಳವಡಿಸುತ್ತೇವೆ. ಅಲ್ಲಿರತಕ್ಕ ಜಾಗವನ್ನು ಮಾರಾಟ ಮಾಡಿ ಬಂದಂತಹ ಹಣದಲ್ಲಿ ಬಂಡವಾಳವನ್ನು ಹಾಕಿ ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡೋಣವೆಂದು ಪ್ರಸ್ತಾಪವಿತ್ತು. ಸಾಕಷ್ಟು ಪ್ರಮಾಣದಲ್ಲಿ ಅಲ್ಲಿ ಜಾಗವಿಲ್ಲ. ಅಲ್ಲಲ್ಲಿ ಸ್ವಲ್ಪ ಬಿಲ್ಡಿಂಗ್ ವಗೈರೆ ಏನೇನೋ ಇದೆ, ಅದರಿಂದ ಸ್ವಲ್ಪ ಕಷ್ಟವಾಗುತ್ತಿದೆ. ಸರ್ಕಾರದಿಂದ ಹಣವನ್ನು ಕೋರಲಾಗಿದೆ, ಸರ್ಕಾರದಿಂದ ಹಣ ಬಂದಮೇಲೆ ನಾವು ವ್ಯವಸ್ಥೆ ಮಾಡುತ್ತೇವೆ. ಒಬ್ಬ ಅಧಿಕಾರಿಯ ಮೇಲೆ ಅಪಾದನೆಯನ್ನು ಮಾಡಿದ್ದೀರಿ. ತಾವು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದೀರಿ. ಆ ಅಧಿಕಾರಿಯ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ, ಈಗ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದೀರಿ. ಕೆಎಸ್‌ಐಸಿ. ಗೋಡೌನ್‌ಗೆ ಬೆಂಕಿ ಬಿದ್ದ ವಿಚಾರದಲ್ಲಿ ಗಮನ ಸೆಳೆದಿದ್ದೀರಿ. ತಕ್ಷಣ ನಾನು ಅಲ್ಲಿಗೆ ಹೋಗಿ ರೆಕಾರ್ಡ್ ನೋಡಿಕೊಳ್ಳತಕ್ಕ ವಾಚ್‌ಮನ್ ಯಾರಿದ್ದ ಅವನ ಕಡೆಯಿಂದ ಬೇಜವಾಬ್ದಾರಿತನ ಕಂಡು ಬಂದಿದ್ದರಿಂದ ಅವನನ್ನು ಸ್ಪಾಟ್‌ನಲ್ಲಿ ಸಸ್ಪೆಂಡ್ ಮಾಡಿದ್ದೇನೆ. ಎನ್‌ಕ್ವಾಯರಿ ಮಾಹಿತಿಯನ್ನು ಕೊಡಿಯೆಂದು ಕೇಳಿದ್ದೀರಿ. ಕೆಎಸ್‌ಐಸಿ ನಷ್ಟ ಅನುಭವಿಸುವುದಕ್ಕೆ ಸಮಸ್ಯೆಗಳು ಬಹಳ ಇವೆ. ದುಡಿಯುವ ಬಂಡವಾಳದ ಕೊರತೆಯಿದೆ. ಅದು ಸ್ವಲ್ಪ

ಸಮಸ್ಯೆಯಾಗಿದೆ. ಆ ಘಟಕಕ್ಕೆ ಬೇಕಾದ ಕಚ್ಚಾ ವಸ್ತುಗಳು ಉತ್ತಮ ದರ್ಜೆಯ ರೇಷ್ಮೆಗೂಡು, ಕಚ್ಚಾ ರೇಷ್ಮೆ, ಜೂಟ್ ರೇಷ್ಮೆ ಇವುಗಳ ಕೊರತೆಯಿದೆ. ಅದು ಸ್ವಲ್ಪ ಸಮಸ್ಯೆಯಾಗಿದೆ. ಆ ಘಟಕಕ್ಕೆ ಬೇಕಾದ ಕಚ್ಚಾ ವಸ್ತುಗಳು ಉತ್ತಮ ದರ್ಜೆಯ ರೇಷ್ಮೆ ಗೂಡು, ಕಚ್ಚಾ ರೇಷ್ಮೆ, ಜೂಟ್ ರೇಷ್ಮೆ ಇವುಗಳ ಕೊರತೆಯಿದ. ಉದಾಹರಣೆಗೆ ಚನ್ನಪಟ್ಟಣ ಘಟಕಕ್ಕೆ 4 ಸಾವಿರ ಟನ್ ಕಚ್ಚಾ ರೇಷ್ಮೆಯ ಸ್ಪನ್ ಸಿಲ್ಕ್‌ನ ಅವಶ್ಯಕತೆ ಇದೆಯೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಈಗ ಏನಾಗಿದೆ ಅಂದರೆ, ಆಮದು ರೇಷ್ಮೆ ನೀತಿಯಿಂದ, ಕಚ್ಚಾರೇಷ್ಮೆಯನ್ನು ರಫ್ತು ಮಾಡಬೇಡಿ ನಮಗೆ ಸಾಕಷ್ಟು ಪ್ರಮಾಣದಲ್ಲಿ ಬೇಕಾಗುತ್ತದೆಂದು ಹೇಳಿದರೂ ಅದರ ಬಗ್ಗೆ ಕೇಂದ್ರಸರ್ಕಾರ ಗಮನ ಕೊಡಲಿಲ್ಲ. ಕೆಎಸ್‌ಐಸಿ ಘಟಕ ಚೆನ್ನಾಗಿ ನಡೆಯುವುದಕ್ಕೆ ಬದಲಾಗಿ ತೊಂದರೆಯನ್ನು ಅನುಭವಿಸುತ್ತಿದೆ. ಇಂತಹ ಅಧಿಕಾರಿಗಳ ಬಗ್ಗೆ ಎನ್‌ಕ್ವಾಯರಿ ಮಾಡಬೇಕೆಂದು ಮಾಹಿತಿಯನ್ನು ಕೊಟ್ಟಿದ್ದೀರಿ. ಇನ್ನು ಸಾಕಷ್ಟು ಮಾಹಿತಿಯನ್ನು ಮಾನ್ಯ ಸದಸ್ಯರು ಕೊಟ್ಟರೆ ಆ ಅಧಿಕಾರಿಯ ಮೇಲೆ ತನಿಖೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಎ. ರಾಮದಾಸ್ :— ಸರ್ಕಾರದ ಗಮನವನ್ನು ಸೆಳೆಯುವಾಗ ನೇರವಾಗಿ ನಿರ್ದಿಷ್ಟವಾಗಿ ಅವರಿಗೆ ಪತ್ರವನ್ನು ಬರೆದು 1998-1999ನೇ ಸಾಲಿನಲ್ಲಿ ಎರಡು ವರ್ಷದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗಿರತಕ್ಕ ಬಗ್ಗೆ ಎಲ್ಲ ಮಾಹಿತಿಯನ್ನು ಕೊಟ್ಟಿದ್ದೇನೆ. ಮಂತ್ರಿಗಳು ಅಲ್ಲಿನ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದಕ್ಕೆ ಬದಲಾಗಿ ಒಬ್ಬ ವಾಚ್‌ಮನ್ ಸಸ್ಪೆಂಡ್ ಮಾಡಿದ್ದಾರೆಂದರೆ ಇದರ ಅರ್ಥವೇನು?

ಅಧ್ಯಕ್ಷರು :— ಅವುಗಳೆಲ್ಲ ಇಲ್ಲಿ ಬೇಕಾಗಿಲ್ಲ. ತಾವು ಕ್ಲಾರಿಫಿಕೇಶನ್ ಕೇಳಿದ್ದೀರಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು.....

ಶ್ರೀ ಎ. ರಾಮದಾಸ್ :— ನನ್ನ ಕ್ಲಾರಿಫಿಕೇಶನ್‌ಗೆ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡುತ್ತಿಲ್ಲ. ನಾನು ಈ ವಿಚಾರದಲ್ಲಿ ನಿರ್ದಿಷ್ಟವಾದ ಆಪಾದನೆಯನ್ನು ಮಾಡಿದ್ದೇನೆ.

ಅಧ್ಯಕ್ಷರು :— ಮಾನ್ಯ ಸದಸ್ಯರು ಐದಾರು ಕ್ಲಾರಿಫಿಕೇಶನ್ಸ್ ಕೇಳಿದ್ದೀರಿ. ತಾವು ಸಾಕು ಮಾಡಿ ದಯವಿಟ್ಟು ಕುಳಿತುಕೊಳ್ಳಿ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕರೆದಿದ್ದೇನೆ. ಮಾನ್ಯ ರಾಮದಾಸ್‌ರವರೇ ತಾವು ಕುಳಿತುಕೊಳ್ಳಬೇಕು. ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಇದೇನು ಸ್ವಾಮಿ? ಗಮನ ಸೆಳೆಯುವ ಸೂಚನೆಯ ನೋಟೀಸ್‌ನಲ್ಲಿ ಇಷ್ಟೊಂದು ಮಾತನಾಡುವುದು ಅಂದರೇನು?

ಶ್ರೀ ಎ. ರಾಮದಾಸ್ :— ತಾವು ನನಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು :— ಈಗ ಅವಕಾಶ ಕೊಡುವುದಿಲ್ಲ, ತಾವು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು.

10. ವಿತ್ತೀಯ ಕಾರ್ಯಕಲಾಪ.

2000-2001ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

+ ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, "2000-2001ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಪಟ್ಟಿಯನ್ನು ಸಭೆಯ ಒಪ್ಪಿಗೆಗೆ ಮುಂದೆ ಮಂಡಿಸುತ್ತಿದ್ದೇನೆ."

ಅಧ್ಯಕ್ಷರು :— ಮಂಡಿಸಲಾಯಿತು.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಪೂರಕ ಅಂದಾಜುಗಳಿಗೆ ಸದನದ ಒಪ್ಪಿಗೆಯನ್ನು ಕೋರುತ್ತಿದ್ದೇನೆ. ಇದು ನಮ್ಮ ರಾಜ್ಯದ ಒಟ್ಟು ಆಯವ್ಯಯಕ್ಕೆ 3.5 ಪರ್ಸೆಂಟ್‌ಗೆ ಮಾತ್ರ ಸೀಮಿತವಾಗಿದೆ. ಒಟ್ಟು ಮೊತ್ತ ನಾವು ಕೇಳಿರತಕ್ಕದ್ದು 676.17 ಕೋಟಿ ರೂಪಾಯಿ. ಇದು ಇಂಡಸ್ಟ್ರೀಸ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮತ್ತು ಹೌಸಿಂಗ್. ಪ್ರಧಾನವಾಗಿ ಹೌಸಿಂಗ್‌ಗೆ 82 ಕೋಟಿ ರೂಪಾಯಿಗಳನ್ನು ರೂರಲ್‌ನಲ್ಲಿ ಆಶ್ರಯಕ್ಕೋಸ್ಕರ ಸಬ್ಸಿಡಿ ರೂಪದಲ್ಲಿ ಬಿಡುಗಡೆ ಮಾಡಿರತಕ್ಕದ್ದು. ಪ್ರಮುಖವಾದ ಖರ್ಚನ್ನು ನಾವು ನಮೂದಿಸಿದ್ದೇವೆ. ಹಾಗೆಯೇ ಮೇಜರ್ ಅಂಡ್ ಮಿಡಿಯಮ್ ಇರಿಗೇಷನ್, ಬೆಣ್ಣೆತೊರೆ ಪ್ರಾಜೆಕ್ಟ್, ವರಾಹಿ ಪ್ರಾಜೆಕ್ಟ್, ಅದೇ ರೀತಿ ಮೈನರ್ ಇರಿಗೇಷನ್ ಪಬ್ಲಿಕ್ ವರ್ಕ್ಸ್‌ಗೆ 130ಕೋಟಿ ರೂಪಾಯಿ, ಸಮಾಜ ಕಲ್ಯಾಣಕ್ಕೆ 36 ಕೋಟಿ ರೂಪಾಯಿ ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕೃಷ್ಣಾರವರು ಮುಖ್ಯಮಂತ್ರಿಗಳಾದ ಮೇಲೆ, ಅವರ ಒಂದು ಅಪಾರವಾದ 40 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಬಹಳ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ಕಾರಣ ಅವರಿಗೆ ಇರತಕ್ಕ 40 ವರ್ಷಗಳ ಅನುಭವದ ಜೊತೆಗೆ ಅವರ ಶಿಕ್ಷಣ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನಪರಿಷತ್‌ನ ಅನುವದ ಜೊತೆಗೆ ಈ ಸಾರಿ ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ಬಹುಮತ ಸಿಕ್ಕಿದೆ. ನಾನು ಬಹಳ ದೊಡ್ಡ ಪ್ರಮಾಣದಲ್ಲಿ ಅವರ ಚೊಚ್ಚಲ ಬಜೆಟ್ ಭಾಷಣದಲ್ಲಿ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆ. ರಾಜ್ಯದ ಜನತೆ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಆದರೆ ಆ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಆಗುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು 676ಕೋಟಿ